**ಮೊದಲನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.**

CC No.1128/2014

CW -2 PW - 2

| | | |
|---|---|---|
| ಹೆಸರು | ಃ | ಮಲ್ಲೇಗೌಡ |
| ತಂದೆಯ ಹೆಸರು | ಃ | ರಾಮೇಗೌಡ |
| ವಯಸ್ಸು | ಃ | 42 ವರ್ಷ |
| ಉದ್ಯೋಗ | ಃ | ಪೋಲೀಸ್ ಹೆಡ್ ಕನ್ಸಟೇಬಲ್ |
| ವಾಸ | ಃ | ಬಿಡದಿ |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 06.10.2023

ನಾನು 2012 ರಿಂದ 2018 ರವರೆಗೆ ಸಾತನೂರು ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆ ಹಾಗೂ ಮುಖ್ಯಪೇದೆಯಾಗಿ ಕೆಲಸ ನಿರ್ವಹಿಸಿರುತ್ತೇನೆ.

ದಿಃ14.03.2014 ರಂದು ಚಾಸಾ-1 ರವರಿಗೆ ಕಾಳೇಗೌಡನದೊಡ್ಡಿಯಲ್ಲಿ ಒಬ್ಬ ಅಸಾಮಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾನೆಂದು ಬಂದ ಖಚಿತ ಮಾಹಿತಿಯ ಮೇರೆಗೆ ಚಾಸಾ-1 ರವರು ನಮಗೆ ಪಂಚಾಯತಿದಾರರನ್ನು ಕರೆದುಕೊಂಡು ಬರುವಂತೆ ತಿಳಿಸಿದ್ದು ನಾವು ಅಲ್ಲೇ ರಾಮಮಂದಿರದ ಬಳಿ ಇದ್ದ ಚಾಸಾ-5 ರಿಂದ 7 ರವರನ್ನು ಕರೆದುಕೊಂಡು ಪೋಲೀಸ್ ಠಾಣೆಗೆ ಬಂದು ಸರ್ಕಾರಿ ವಾಹನದಲ್ಲಿ ಕಾಳೇಗೌಡನದೊಡ್ಡಿಗೆ ಹೋದೆವು. ಬಸವರಾಜು ರವರ ಅಂಗಡಿಯ ಬಳಿ ಹೋಗಿ ಮರೆಯಲ್ಲಿ ನಿಂತು ವೀಕ್ಷಿಸಿ, ಒಂದು ಬಾಕ್ಸ್ ನಲ್ಲಿ ಸದರಿಯವರು ಮದ್ಯ ಮಾರಾಟ ಮಾಡುತ್ತಿರುವುದು ಕಂಡು ಬಂತು. ನಾವು ಚಾಸಾ-1 ಹಾಗೂ ಚಾಸಾ-5 ರಿಂದ 7 ರವರೊಟ್ಟಿಗೆ ಹೋಗಿ ದಾಳಿ ಮಾಡಿ ಸದರಿಯವರನ್ನು ಕೇಳಲಾಗಿ ತಮ್ಮಲ್ಲಿ ಪರವಾನಿಗೆ ಇದೆಯಾ ಎಂದರೆ ಅಸಾಮಿ ಇಲ್ಲ ಎಂದು ಹೇಳಿದ್ದು, ಆತನ ಹೆಸರು ಕೇಳಲಾಗಿ ಆತನ ಹೆಸರು ಬಸವರಾಜು ಬಿನ್ ಬಸವೇಗೌಡ, ಕಾಳೇಗೌಡನದೊಡ್ಡಿ ಗ್ರಾಮ ಎಂದು ಹೇಳಿರುತ್ತಾರೆ.

ಬಾಕ್ಸ್ ತೆಗೆದು ನೋಡಲಾಗಿ ಸದರಿ ಬಾಕ್ಸ್ ನಲ್ಲಿ ಹೈವಾರ್ಡ ಚಿಯರ್ ವಿಸ್ಕಿ 180 ಎಂಎಲ್ ನ 28 ಪ್ಯಾಕೆಟ್ ಗಳು, ಓಲ್ಡ್ ಟವರೀನ್ ವಿಸ್ಕಿ 180 ಎಂಎಲ್ ನ 8 ಪ್ಯಾಕೆಟ್ ಗಳು, 90 ಎಂಎಲ್ ನ ಹೈವಾರ್ಡ ಚಿಯರ್ ವಿಸ್ಕಿ 48 ಪ್ಯಾಕೇಟ್ ಗಳು, 90 ಎಂಎಲ್ ನ ಓರಿಜಿನಲ್ ಚಾಯ್ಸ ವಿಸ್ಕಿ 12 ಪ್ಯಾಕೆಟ್ ಗಳನ್ನು ಪಂಚರ ಸಮಕ್ಷಮ ಅಮಾನತು ಪಡಿಸಿಕೊಂಡು ಸದರಿ

ಪ್ಯಾಕೆಟ್ ಗಳಲ್ಲಿ ಒಂದೊಂದು ಪ್ಯಾಕೆಟ್ ಗಳನ್ನು ಬಿಳಿ ಬಟ್ಟೆಯಲ್ಲಿ ಕಟ್ಟಿ ಸೀಲ್ ಹಾಕಿ, ಆರೋಪಿಯನ್ನು ಠಾಣೆಗೆ ಕರೆದುಕೊಂಡು ಬಂದಿರುತ್ತೇವೆ.

ಸಾಕ್ಷಿಯು ನಿಪಿ-2 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮ-1 ರಿಂದ 4 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀಸವಾಲುಃ ಆರೋಪಿತರ ಪರ ಶ್ರೀ ಎಜಿಆರ್ ವಕೀಲರಿಂದಃ</u>**

ಚಾಸಾ-1, 4 ಮತ್ತು 9 ನನ್ನ ಮೇಲಾಧಿಕಾರಿಗಳು, ಚಾಸಾ-3 ನನ್ನ ಜೊತೆ ಕೆಲಸ ಮಾಡುವವರು ಎಂದರೆ ಸರಿ. ಬರವಣಿಗೆಯಲ್ಲಿ ದಾಳಿ ಮಾಡಲು ನಮ್ಮ ಮೇಲಾಧಿಕಾರಿಗಳು ಕೇಳಿರುವುದಿಲ್ಲ ಕೇವಲ ಬಾಯಿ ಮಾತಿನಲ್ಲಿ ಕೇಳಿರುತ್ತಾರೆ. ನಿಪಿ-2 ರಲ್ಲಿ ಠಾಣೆಯನ್ನು ಎಷ್ಟು ಗಂಟೆಗೆ ಬಿಟ್ಟೆವು ಎಂದು ನಮೂದುಇಲ್ಲ ಎಂದರೆ ಸರಿ. ಸ್ಥಳಕ್ಕೆ ಎಷ್ಟು ಗಂಟೆಗೆ ಹೋದೆವು ಎಂದು ನಿಪಿ-2 ರಲ್ಲಿ ನಮೂದು ಇಲ್ಲ ಎಂದರೆ ಸರಿ. ನಿಪಿ-2 ರಲ್ಲಿ ಯಾವ ವಾಹನದಲ್ಲಿ ಹೋದೆವು ಎಂದು ಬರೆದಿಲ್ಲ ಎಂದರೆ ಸರಿಯಲ್ಲ. ವಾಹನ ಸಂಖ್ಯೆ ನಿಪಿ-2 ರಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ.

ಆರೋಪಿಯನ್ನು ಮರೆಯಲ್ಲಿ ನಿಂತು ನಾವು ದಾಳಿ ಮಾಡುವ ಮುಂಚೆ ನೋಡಿಲ್ಲ ಎಂದರೆ ಸರಿಯಲ್ಲ. ನಿಪಿ-2 ಕ್ಕೆ ನನ್ನ ಜೊತೆ ಚಾಸಾ-3, 5 ರಿಂದ 7 ರವರು ಸಹಿ ಮಾಡಿರುತ್ತಾರೆ. ನಿಪಿ-2 ನ್ನು ಠಾಣೆಯಲ್ಲಿ ಸೃಷ್ಟಿಸಿ, ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-2 ಕ್ಕೆ ಠಾಣೆಯಲ್ಲಿ ಸಹಿ ಮಾಡಿದ್ದೇನೆಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳಿಗೆ ಯಾವುದೇ ಹೇಳಿಕೆ ನೀಡಿಲ್ಲ, ಮೇಲಾಧಿಕಾರಿಗಳಿಗೆ ಸಹಾಯ ಮಾಡಲು ಹೇಳಿಕೆ ನೀಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮು.ಮ-1 ರಿಂದ 4 ನ್ನು ಯಾವುದೋ ಬಾರಿನಿಂದ ತೆಗೆದುಕೊಂಡು ಬಂದು ಈ ಪ್ರಕರಣದಲ್ಲಿ ಬಳಸಿದ್ದೇವೆಂದರೆ ಸರಿಯಲ್ಲ. ಮು.ಮ-1 ರಿಂದ 4 ನ್ನು ಸ್ಥಳದಲ್ಲಿ ವಶ ಪಡಿಸಿಕೊಂಡಿಲ್ಲ, ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಾನು ಘಟನೆ ದಿನದಂದು ಕರ್ತವ್ಯ ನಿರ್ವಹಿಸುತ್ತಿದ್ದದ್ದಕ್ಕೆ ಸಂಬಂಧಿಸಿದಂತೆ ಯಾವುದೇ

ದಾಖಲೆಯನ್ನು ಮೇಲಾಧಿಕಾರಿಗಳಿಗೆ ನೀಡಿಲ್ಲ. ಮುಂದುವರಿದು ಸಾಕ್ಷಿ ಠಾಣೆಯಲ್ಲಿ ನಮ್ಮ ಹಾಜರಾತಿ ಇರುತ್ತದೆಂದು ನುಡಿಯುತ್ತಾರೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಏನೂ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಮೊದಲನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪು